

ವಾರಿಜಳಾದರೂ ಅಷ್ಟೇ. ಸುಮ್ಮನೆ ಗಾಳಿಗೆ ಸಿಕ್ಕ ತರಗಿನಷ್ಟೇ ಸಹಜವಾಗಿ ತನ್ನನ್ನು ಬದುಕಿನ ಓಟಕ್ಕೆ ಒಡ್ಡಿಕೊಂಡಿದ್ದಾಳೆ ಅನಿಸಿತು. ಹಿಂದೆಯೇ ಮಧುರಿಮಾ ನೆನಪಾದಳು. ಹಿಂದೆಂದಿಗಿಂತಲೂ ತೀವ್ರವಾಗಿ ನೆನಪಾದಳು. ಮಧುರಿಮಾ... ಚೆಂದನೆ ಹೆಸರು. ಅವಳನ್ನ ನಾನು ಚಿಕ್ಕದಾಗಿ ರೀಮಾ ಅನ್ನುತ್ತಿದ್ದೆ. ಕಡುಗಪ್ಪು ಕಣ್ಣುಗಳ, ಒತ್ತುರೆಪ್ಪೆಯ, ನಳಿನ ದೇಹದ ಸೊಬಗಿ ಅವಳು. ಅವಳಿಗೆ ನಸುಗುಲಾಬಿ ಬಣ್ಣವಿತ್ತು. ನಸುವೇ ನಾಚಿಕೊಂಡರೂ ಕೆನ್ನೆ ಕೆಂದಾವರೆಯಾಗಿ ಅರಳುತ್ತಿತ್ತು. ಕೆನ್ನೆಯ ನುಣುಪಿಗೆ ಏನನ್ನೂ ಹೋಲಿಸಬಾರದು. ಅಷ್ಟೊಂದು ನಯ. ಅಂಥಾ ಮಧುರಿಮಾ ನನ್ನ ಕಾಲೇಜಿನ ದಿನಗಳಲ್ಲಿ ನನಗೆ ಜೊತೆಯಾಗಿದ್ದಳು. ನನ್ನ ಚಿಕ್ಕಪುಟ್ಟ ಗೆಲುವುಗಳಿಗೂ ಸಂಭ್ರಮಿಸಿ ಹುರಿದುಂಬಿಸುತ್ತಿದ್ದಳು. ಕತೆ, ಕವಿತೆಗಳಿಗೆ ಸ್ಫೂರ್ತಿಯಾಗಿದ್ದಳು. ನನ್ನಂತೆಯೇ ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಓದುತ್ತಿದ್ದವಳು. ಅಪ್ಪ ಅಮ್ಮನ ಬಗೆ ಹೆಚ್ಚಿನ ವಿವರಗಳನ್ನು ಬಿಚ್ಚಿಟ್ಟಿರಲಿಲ್ಲ. ನನಗಾದರೂ ಅದರ ಅವಶ್ಯಕತೆ ತೋರಿ ಬಂದಿರಲಿಲ್ಲ. ಅವಳಿಗೆ ನಾನೆಂದರೆ ಅಷ್ಟೊಂದು ಪ್ರೀತಿಯಿತ್ತು. ಅದನ್ನು ಸೆಳೆತ ಅಂದರೇ ಸರಿಯೇನೋ... ಸದಾ ನನ್ನ ಕೈಯಳತೆಯಲ್ಲೇ ಇರುತ್ತಿದ್ದಳು. ನನ್ನೊಂದಿಗೆ ಗುರುತಿಸಿಕೊಳ್ಳುತ್ತಿದ್ದಳು. ಕಾಲೇಜಿಗೆ ಕಾಲೇಜೇ ನಮ್ಮಿಬ್ಬರ ಬಗ್ಗೆ ಒಂದು ಒಪೀನಿಯನ್ನಿಗೆ ಬಂದು ಬಿಟ್ಟಿತ್ತು. ಇದ್ದರೆ ಇಂಥಾ ಜೋಡಿ ಇರಬೇಕು ಅನಿಸುವಂತಿತ್ತು ನಮ್ಮ ಒಡನಾಟ. ನಾಲ್ಕು ಜನರ ನಡುವೆ ಕೈ ಬೆಸೆದು ನಡೆಯುತ್ತಿದ್ದರೆ ಜಗತ್ತು ನಮ್ಮನ್ನ ನಿಂತು ನೋಡುತ್ತಿದೆಯೇನೋ ಎಂಬ ಹಮ್ಮಿನಲ್ಲಿ ನಾ ತೇಲಿಹೋಗುತ್ತಿದ್ದೆ. ನಮ್ಮ ಪ್ರೀತಿಯ ಮೇಲೆ ಎಲ್ಲರಿಗೂ ನಂಬಿಕೆಯಿತ್ತು. ನನಗಂತೂ ಕೇಳುವುದೇ ಬೇಡ. ಐ ಲವ್ ಯು ಅಂತ ಹೇಳುವುದರಲ್ಲಿ ಅರ್ಥವಿಲ್ಲ. ಪ್ರೀತಿ ಇದೆ ಅಂತಾದರೆ, ಅದು ನಮ್ಮ ಪ್ರತಿ ನಡೆಯಲ್ಲೂ ಗೊತ್ತಾಗೇ ಆಗುತ್ತೆ ಅಂತ ರೀಮಾ ಆಗಾಗ ಹೇಳುತ್ತಿದ್ದಳು. ಅವಳ ಮಾತುಗಳಲ್ಲಿ ನಾನು ನಿಜವನ್ನೇ ಕಾಣುತ್ತಿದ್ದೆ. ಅವಳ ಕಣ್ಣ ಚಿಕ್ಕ ಚಲನೆಯಲ್ಲೂ ಅಗಾಧ ಪ್ರೀತಿ ಕದಲುವಂತೆ ಕಾಣುತ್ತಿತ್ತು. ಅವಳ ಬೆಚ್ಚನೆ ತೋಳುಗಳಲ್ಲಿ ನಾನು ಕಳೆದ ಸಮಯಗಳಿಗೆ ನಾನು ಅತ್ಯಂತ ಋಣೀಭೂತನಾಗಿ ಫೀಲ್ ಮಾಡುತ್ತಿದ್ದೆ. ಅವಳ ಸಾಂಗತ್ಯದಲ್ಲಿ ನಾನು ಮನೆ, ಜನ, ಊರು ಎಲ್ಲವನ್ನೂ ಮರೆತೆ. ಅವಳ ಮುಂದೆ ಯಾವುದೂ ದೊಡ್ಡದೆನಿಸಲೇ ಇಲ್ಲ. ಪ್ರೀತಿಯ ಆಳಸುಳಿಗೆ ಸಿಲುಕಿದ ಪ್ರತಿಯೊಬ್ಬನಿಗೂ ಬರುವ ಸಹಜ ಭಾವ.

ನನ್ನ ಬಾಲ್ಯದಿಂದಲೂ ನನ್ನ ಬದುಕಿನ ಪ್ರತಿಯೊಂದು ಹಂಬಲವೂ ನೆರವೇರುವಂತೆ ಮಾಡಿದ್ದ ಭಗವಂತನಿಗೆ ನಾನು ಕೃತಾರ್ಥನಾಗಿದ್ದೆ. ಚಂದ್ರಾಳ ಸಾಂಗತ್ಯದಲ್ಲಿ ನಾನು ಕಂಡುಕೊಂಡ ಸವಿಗಿಂತಲೂ ಅಮೂಲ್ಯ ವಿಶೇಷವನ್ನು ಮಧುರಿಮಾ ನನಗೆ ಕರುಣಿಸಿದ್ದಳು. ಅವಳಲ್ಲದೆ ಮತ್ತೇನೂ ಇಲ್ಲವೆನ್ನುವ ಅಂಥದ್ದೇ ಒಂದು ಗಳಿಗೆಯಲ್ಲಿ ನಾನು ಅವಳಲ್ಲಿ ಮದುವೆಯ ಪ್ರಸ್ತಾಪವಿಟ್ಟಿದ್ದೆ. ನನ್ನನ್ನು ಅಪ್ಪಿಕೊಂಡಿದ್ದ ನಳಿದೋಳುಗಳನ್ನು ಸಡಿಲಿಸಿದ ಮಧುರಿಮಾ ಸಣ್ಣಗೆ ನಕ್ಕಿದ್ದಳು. 'ನಮ್ಮ ನಡುವೆ ಅಂಥ ಫಾರ್ಮಲಿಟೀಸ್ ಯಾಕೆ ರಾವಿ? ನಿನಗೇ ಗೊತ್ತಿರಬೇಕು ನನಗೆ ಯಾವುದೇ ರೀತಿಯ ಕಮಿಟ್‌ಮೆಂಟ್ಸ್ ಹಿಡಿಸೋದಿಲ್ಲ.'